# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1450 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : | 16.03.2026 |
| **ಉತ್ತರಿಸಬೇಕಾದ ಸಚಿವರು** | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಪ್ರಶ್ನೆ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ವಿವಿಧ ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಯಾಲಿಸಿಸ್ ಯಂತ್ರಗಳು ಹಾಗೂ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳು ಕಳೆದ ಕೆಲವು ತಿಂಗಳುಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಯನ್ನು ಅನುಷ್ಠಾನಗೊಳಿಸಿ ಕಾರ್ಯನಿರ್ವಹಿಸುತ್ತಿದೆ. ಯಾವುದೇ ಡಯಾಲಿಸಿಸ್ ಕೇಂದ್ರಗಳಲ್ಲಿ ಡಯಾಲಿಸಿಸ್ ಸೇವೆಗಳು ಸ್ಥಗಿತಗೊಂಡಿರುವುದಿಲ್ಲ.<br><br>ರಾಜ್ಯದಲ್ಲಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು PPP ಮಾದರಿಯಲ್ಲಿ 2019 2020ನೇ ಸಾಲಿನಿಂದ ಮೂರು ಸೇವದಾರರಿಂದ ರಾಜ್ಯದ ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 15 ಸಿ.ಟಿ. ಸ್ಕ್ಯಾನ್ (CT Scan) ಕೇಂದ್ರಗಳು ಹಾಗೂ 06 ಎಂ.ಆರ್.ಐ (MRI) ಕೇಂದ್ರಗಳು ಸೇವೆಯನ್ನು ಒದಗಿಸಲಾಗುತ್ತಿದೆ.<br><br>PPP ಸೇವದಾರರಲ್ಲಿ ಒಬ್ಬರಾದ M/s KRSNAA DIAGNOSTICS ರವರು ದಿನಾಂಕ:18.02.2026 ರಿಂದ ಸೇವೆಗಳನ್ನು ಸ್ಥಗಿತಗೊಳಿಸಿದರೂ ಸಹ, ಎಲ್ಲಾ ತುರ್ತು ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೇವೆಗಳನ್ನು ನಿರಂತವಾಗಿ ಸದರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೇ ಒದಗಿಸಲಾಗುತ್ತಿದೆ.<br><br>ತುರ್ತು ಇಲ್ಲದೆ ಇರುವ ರೋಗಿಗಳಿಗೆ ನಿರಂತರವಾಗಿ ಎಂ.ಆರ್.ಐ (MRI) ಮತ್ತುಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ನೀಡಲು ಜಿಲ್ಲಾ ಆಸ್ಪತ್ರೆಗಳೊಂದಿಗೆ ಸದರಿ ಜಿಲ್ಲೆಗಳಲ್ಲಿಯ SAST Empanelled ವೈದ್ಯಕೀಯ ಸಂಸ್ಥೆಗಳು/ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಸೇವೆಗಳನ್ನು ನೀಡಲಾಗುತ್ತಿದೆ. |
| ಆ) | ಈ ಸೌಲಭ್ಯಗಳನ್ನು ಒದಗಿಸುತ್ತಿರುವ ಖಾಸಗಿ ಸೇವಾ ಸಂಸ್ಥೆಗಳಿಗೆ (Service Providers) ಸರ್ಕಾರವು ನೂರಾರು ಕೋಟಿ ರೂಪಾಯಿಗಳ ಬಿಲ್ ಪಾವತಿಯನ್ನು ಬಾಕಿ ಉಳಿಸಿಕೊಂಡಿರುವುದು ಮತ್ತು ಇದೇ ಕಾರಣಕ್ಕೆ ಅವರು ಸೇವೆಗಳನ್ನು ನಿಲ್ಲಿಸಿರುವುದು ನಿಜವೇ; (ಸದ್ಯಕ್ಕೆ ಬಾಕಿ ಇರುವ ಒಟ್ಟು ಮೊತ್ತದ ಸಂಸ್ಥೆವಾರು ವಿವರ ನೀಡುವುದು); | ರಾಜ್ಯದಲ್ಲಿ ಡಯಾಲಿಸಿಸ್ ಸೇವೆಗಳನ್ನು PPP ಮಾದರಿಯಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗದಲ್ಲಿ (ಹೈಬ್ರಿಡ್ ಮಾದರಿಯಲ್ಲಿ) ಡಯಾಲಿಸಿಸ್ ಸೇವೆಗಳನ್ನು ಸಲ್ಲಿಸುತ್ತಿದ್ದು, ಸದರಿ ಸೇವದಾರರು ರಾಜ್ಯದ ಯಾವುದೇ ಡಯಾಲಿಸಿಸ್ ಕೇಂದ್ರಗಳಲ್ಲಿ ಡಯಾಲಿಸಿಸ್ ಸೇವೆಯನ್ನು ಸ್ಥಗಿತಗೊಳಿಸಿರುವುದಿಲ್ಲ.<br><br>ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ಒದಗಿಸುತ್ತಿರುವ ಖಾಸಗಿ ಸೇವಾ ಸಂಸ್ಥೆಗಳಿಗೆ 2019 -2020 ನೇ ಸಾಲಿನಿಂದ (Service Providers) ಬಾಕಿಯಿರುವ ಬಿಲ್ಲಿನ ಅಂದಾಜು ಮೊತ್ತ ಕೆಳಕಂಡಂತಿವೆ:-<br><br>1.M/S KrsnaaDiagnostics: ರೂ.23,09,95,260/-<br>2.M/S K.V Hanchinal Pvt. Ltd-ರೂ.6,29,25,800/- 2021<br>3.M/S Dhalaxmi Dresses-ರೂ.1,97,56,125/-<br>ಇದಲ್ಲದೆ 5% ವಾರ್ಷಿಕ ಹೆಚ್ಚಳ ನೀಡದೆ ಇರುವ ಅಂದಾಜು ಮೊತ್ತ ಈ ಕೆಳಕಂಡಂತಿದೆ:-<br>1.M/S KrsnaaDiagnostics: ರೂ.4743.60/- ಲಕ್ಷಗಳು (Nov-2024ರ ವರೆಗೆ) |

| | | |
|---|---|---|
| | | 2.M/S K.V Hanchinal Pvt. Ltd ರೂ.449.97/ ಲಕ್ಷಗಳು (Sep 2024ರ ವರೆಗೆ)<br>3.M/S Dhalaxmi Dresses ರೂ 32.70/-ಲಕ್ಷಗಳು (Oct 2024 ರ ವರೆಗೆ)<br>ಪ್ರಸ್ತುತ PPP ಮಾದರಿಯಲ್ಲಿ ರೋಗಿಗಳಿಗೆ ಅನಗತ್ಯ ಸ್ಕ್ಯಾನ್‌ಗಳನ್ನು/ ಒಂದೇ ರೋಗಿಗೆ ಒಂದೆ ದಿವಸ ಒಂದಕ್ಕಿಂತ ಹೆಚ್ಚು ಸ್ಕ್ಯಾನ್‌ಗಳನ್ನು ಮಾಡಿ ರೋಗಿಗಳನ್ನು ಅನಗತ್ಯ ವಿಕಿರಣಕ್ಕೆ/ಕ್ಷ-ಕಿರಣಕ್ಕೆ ಒಡ್ಡುತ್ತಿರುವುದರಿಂದ ರೋಗಿಗಳ ಜೀವಕ್ಕೆ ಅಪಾಯಕಾರಿಯಾಗಿರುವುದು ಗಮನಿಸಲಾಗಿ, ಇದರಿಂದ ದುಷ್ಪರಿಣಾಮಗಳು ಉಂಟಾಗುವ ಸಂಭವವಿರುತ್ತದೆ. ಹಾಗೂ Contrast Scansಗಳಿಗೆ ಶಿಫಾರಸ್ಸು ಮಾಡುವ ಮುನ್ನ ಅಗತ್ಯ ಪ್ರಯೋಗಾಲಯ ಪರೀಕ್ಷೆಗಳನ್ನು ಮಾಡಿಸದೇ ಇರುವುದು ಮುಂತಾದ ನ್ಯೂನ್ಯತೆಗಳನ್ನು ಗಮನಿಸಿ, ನ್ಯೂನ್ಯತೆಗಳ ಹಿನ್ನಲೆಯಲ್ಲಿ ಅನಗತ್ಯ ಸ್ಕ್ಯಾನ್‌ಗಳನ್ನು ತಪ್ಪಿಸಲು ಹಾಗೂ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಕೆಮಾಡಲು ಸದರಿ ಸಂಸ್ಥೆಗಳಿಗೆ ಹಣಪಾವತಿಯನ್ನು ಬಾಕಿ ಉಳಿಸಿಕೊಳ್ಳಲಾಗಿದೆ. ಇದರಲ್ಲಿ ಯಾವುದೇ ಅಧಿಕಾರಿಯ ನಿರ್ಲಕ್ಷತೆ ಇರುವುದಿಲ್ಲ. |
| ಇ) | ಈ ಸೇವಾ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ (Agreement) ಅವಧಿ ಮುಕ್ತಾಯವಾಗಿದೆಯೇ; ಹಾಗಿದ್ದಲ್ಲಿ, ಹೊಸ ಒಪ್ಪಂದ ಮಾಡಿಕೊಳ್ಳುವಲ್ಲಿ ಅಥವಾ ಅಸ್ತಿತ್ವದಲ್ಲಿರುವ ಒಪ್ಪಂದವನ್ನು ನವೀಕರಿಸುವಲ್ಲಿ ಸರ್ಕಾರಕ್ಕಿರುವ ತಾಂತ್ರಿಕ ಅಡಚಣೆಗಳೇನು; | CT ಮತ್ತು MRIಸ್ಕ್ಯಾನ್‌ಗಳ ಸೌಲಭ್ಯವನ್ನು ಒದಗಿಸುತ್ತಿರುವ ಸೇವಾ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ (Agreement) ಅವಧಿಯು ಇನ್ನೂ ಚಾಲ್ತಿಯಲ್ಲಿದೆ ಆದ್ದರಿಂದ ಹೊಸ ಒಪ್ಪಂದ ಮಾಡಿಕೊಳ್ಳುವಲ್ಲಿ ಅಥವಾ ಅಸ್ತಿತ್ವದಲ್ಲಿರುವ ಒಪ್ಪಂದವನ್ನು ನವೀಕರಿಸುವ ಅಗತ್ಯತೆ ಇರುವುದಿಲ್ಲ.<br><br>ಪ್ರಸ್ತುತ ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CTScan) ಸೌಲಭ್ಯಗಳು PPP ಮಾದರಿಯಲ್ಲಿ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳೂ ಸೇರಿದಂತೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ In House ಮಾದರಿಯಲ್ಲಿ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ನೀಡಲು ಸರ್ಕಾರವು ಯೋಜಿಸಿದೆ ಹಾಗೂ ಕ್ರಮವಹಿಸಲಾಗುತ್ತಿದೆ.<br><br>ರಾಜ್ಯದಲ್ಲಿ PPP ಮಾದರಿಯಲ್ಲಿ ಡಯಾಲಿಸಿಸ್ ಸೇವೆಗಳನ್ನು ಒದಗಿಸುತ್ತಿರುವ ಸೇವಾ ಸಂಸ್ಥೆಗಳೊಂದಿಗೆ 2023 24 ರಿಂದ 5 ವರ್ಷ ಕರಾರು ಒಪ್ಪಂದವಾಗಿದೆ. |
| ಈ) | ಕಳೆದ 2 ವರ್ಷಗಳಲ್ಲಿ (2024-25 ಮತ್ತು 2025-26ನೇ ಸಾಲಿನಲ್ಲಿ) ರಾಜ್ಯದ ಆಸ್ಪತ್ರೆಗಳಲ್ಲಿ ಕೆಟ್ಟು ನಿಂತಿರುವ ಡಯಾಲಿಸಿಸ್ ಮತ್ತು ಸ್ಕ್ಯಾನಿಂಗ್ ಉಪಕರಣಗಳ ದುರಸ್ತಿಗೆ (Repair) ಬಿಡುಗಡೆ ಮಾಡಲಾದ ಒಟ್ಟು ಅನುದಾನವೆಷ್ಟು; ಈ ಪೈಕಿ ಎಷ್ಟು ಮೊತ್ತವನ್ನು ಬಳಸಿಕೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು); | ರಾಜ್ಯದಲ್ಲಿ ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ವಿಭಾಗದಲ್ಲಿ ಡಯಾಲಿಸಿಸ್ ಸೇವೆಗಳನ್ನು PPP ಮಾದರಿಯಲ್ಲಿ ಸೇವಾಸಂಸ್ಥೆಗಳೊಂದಿಗೆ ಒದಗಿಸಲಾಗುತ್ತಿದೆ. ಕರಾರು ಒಪ್ಪಂದದ ಪ್ರಕಾರ ಸದರಿ ಡಯಾಲಿಸಿಸ್ ಯಂತ್ರಗಳ ನಿರ್ವಹಣೆಯನ್ನು ಡಯಾಲಿಸಿಸ್ ಸೇವಾದಾರ ಸಂಸ್ಥೆಗಳ ಜವಬ್ದಾರಿಯಾಗಿರುತ್ತದೆ. ಹಾಗೂ ಸದರಿ ಯಂತ್ರಗಳ ದುರಸ್ತಿಗಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.<br><br>ರಾಜ್ಯದ ಆಸ್ಪತ್ರೆಗಳಲ್ಲಿ 06 ಎಂ.ಆರ್.ಐ (MRI) ಮತ್ತು 15 ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳು PPP ಮಾದರಿಯಲ್ಲಿ ನೀಡಲಾಗುತ್ತಿದ್ದು, ಸ್ಕ್ಯಾನಿಂಗ್ ಉಪಕರಣಗಳ ದುರಸ್ತಿಗೆ NFDS ಅಡಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಲಾಗಿರುವುದಿಲ್ಲ. |

| | | |
|---|---|---|
| ಊ) | ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಗಂಭೀರ ವೈದ್ಯಕೀಯ ಸೇವೆಗಳು ಸ್ಥಗಿತಗೊಂಡಿರುವುದರಿಂದ ಬಡ ರೋಗಿಗಳು ಅನಿವಾರ್ಯವಾಗಿ ಖಾಸಗಿ ಡಯಾಲಿಸಿಸ್ ಮತ್ತು ಸ್ಕ್ಯಾನಿಂಗ್ ಕೇಂದ್ರಗಳತ್ತ ಹೋಗಿ ಆರ್ಥಿಕವಾಗಿ ಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಸರ್ಕಾರ ಹಾಕಿಕೊಂಡಿರುವ ಕಾಲಮಿತಿ ಯಾವುದು? | ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಗಳು ಸ್ಥಗಿತಗೊಂಡಿರುವುದಿಲ್ಲ, ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಹಾಗೂ ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನಿರಂತರವಾಗಿ ಡಯಾಲಿಸಿಸ್ ಸೇವೆಯನ್ನು ಒದಗಿಸಲಾಗುತ್ತಿದೆ.<br><br>ರೋಗಿಗಳಿಗೆ ನಿರಂತರವಾಗಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ನೀಡಲು ಸದರಿ ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳೊಂದಿಗೆ SAST Empanelled ವೈದ್ಯಕೀಯ ಸಂಸ್ಥೆಗಳು/ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಸೇವೆಗಳನ್ನು ನೀಡಲಾಗುತ್ತಿದೆ.<br><br>SAST ಮೂಲಕ December-2024 ರಿಂದ CT ಮತ್ತು MRi ಸ್ಕ್ಯಾನ್ ಸೇವೆಗಳನ್ನು ನೀಡಲಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳಲ್ಲಿ In-House ಮಾದರಿಯಲ್ಲಿ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲು ಕ್ರಮಹಿಸಲಾಗುತ್ತಿದೆ. ಈಗಾಗಲೇ ಕೆಲವು ಜಿಲ್ಲಾ ಆಸ್ಪತ್ರೆಗಳಿಗೆ CT ಮತ್ತು MRI ಸ್ಕ್ಯಾನ್ ಯಂತ್ರಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |

ಸಂಖ್ಯೆ: ಆಕುಕ 17 ಎಸ್.ಟಿ.ಕ್ಯೂ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು